ಹುಬ್ಬಳ್ಳಿ ಕ್ಯಾನ್ಸರ್ ಆಸ್ಪತ್ರೆಯ ನಿರ್ವಹಣೆ

2767 (3395) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿಯಲ್ಲಿರುವ ಏಕೈಕ ಸರ್ಕಾರಿ ಕ್ಯಾನ್ಸರ್ ಆಸ್ಪತ್ರೆಗೆ ದಾನಿಗಳ ಸಂಖ್ಯೆ ಕಡಿಮೆಯಾಗಿ ಖರ್ಚಿನ ಭಾರ ನಿಭಾಯಿಸಲಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಪ್ರತಿಷ್ಠಿತ ಆಸ್ಪತ್ರೆಗೆ ರಾಜ್ಯ ಹಾಗೂ ನೆರ ರಾಜ್ಯಗಳಿಂದ ರೋಗಿಗಳು ಬರುತ್ತಿದ್ದು ಇಡೀ ಉತ್ತರ ಕರ್ನಾಟಕಕ್ಕೆ ಆಸರೆಯಾಗಿರುವ ಈ ಆಸ್ಪತ್ರೆಯ ಆಸರೆಗೆ ಸರ್ಕಾರ ಸಹಾಯ ನೀಡಲಿದೆಯೇ;

ಇ) ಈ ಆಸ್ಪತ್ರೆಯ ಬೇತರಿಕೆಗೆ ಸರ್ಕಾರ ತೆಗೆದು ಕೊಂಡಿರುವ ಕ್ರಮಗಳೇನು?

ಡಾ॥ ಎ. ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಹುಬ್ಬಳ್ಳಿಯಲ್ಲಿ ಸರ್ಕಾರಿ ಕ್ಯಾನ್ಸರ್ ಆಸ್ಪತ್ರೆ ಇರುವುದಿಲ್ಲ. ಸರ್ಕಾರಿ ಸ್ವಾಯತ್ತ ಸಂಸ್ಥೆಯಾದ ಹುಬ್ಬಳ್ಳಿಯ ಕಿಮ್ಸ್ ಸಂಸ್ಥೆಯಲ್ಲಿ ಕ್ಯಾನ್ಸರ್ ಚಿಕಿತ್ಸಾ ಘಟಕ ಇರುತ್ತದೆ. ಈ ಘಟಕವು ಸರ್ಕಾರ ನೀಡುವ ಅನುದಾನದಿಂದ ನಡೆಯುತ್ತಿದೆ. ಈ ಘಟಕಕ್ಕೆ ದಾನಿಗಳಿಂದ ಧನ ಸಹಾಯ ಪಡೆದಿರುವುದಿಲ್ಲ.

ಆ) ಹೌದು.

ಇ) ಈ ಸಂಸ್ಥೆಗೆ ಬಿಡುಗಡೆಯಾದ ಅನುದಾನದಲ್ಲಿ ಈ ಘಟಕದ ನಿರ್ವಹಣೆಯಾಗುತ್ತಿದೆ.

ಅನುಸಂಧಾನ ಹಾಗೂ ಗ್ರಾಮೀಣ ತಂತ್ರಜ್ಞಾನ ಪ್ರಗತಿ ಸಮಿತಿ.

2768 (3396) ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿ (ಅಂಕೋಲ): ಮಾನ್ಯ ಗ್ರಾಮೀಣಾಭಿವೃದ್ಧಿ ಪಂ. ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಸರ್ಕಾರದ ಅನುಸಂಧಾನ ಹಾಗೂ ಗ್ರಾಮೀಣ ತಂತ್ರಜ್ಞಾನ ಪ್ರಗತಿಯ ಸಮಿತಿಯ (ಕರ್ನಾಟಕ) ಪ್ರಯೋಜನವನ್ನು ಪಡೆಯಲು ರಾಜ್ಯ ಸರ್ಕಾರ ಹಾಗೂ ರಾಜ್ಯದ ಸ್ವಯಂ ಸೇವಾ ಸಂಸ್ಥೆಗಳು ನಿರಾಸಕ್ತಿ ತೋರಿರುವುದು ನಿಜವೆ?

ಆ) ಕರ್ನಾಟಕದ ಅಧಿಕಾರಿಗಳು, ಕಚೇರಿಗೆ ಭೇಟಿ ನೀಡುವುದಾಗಲಿ, ಸಭೆಗೆ ಹಾಜರಾಗುವುದಾಗಲಿ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು) :

ಅ) ಕೇಂದ್ರ ಸರ್ಕಾರದ ಅನುಸಂಧಾನ ಹಾಗೂ ಗ್ರಾಮೀಣ ತಂತ್ರಜ್ಞಾನ ಪ್ರಗತಿಯ ಸಮಿತಿಯ (ಕರ್ನಾಟಕ) ಪ್ರಯೋಜನವನ್ನು ಪಡೆಯಲು ರಾಜ್ಯದ ಸ್ವಯಂ ಸೇವಾ ಸಂಸ್ಥೆಗಳು ಆಸಕ್ತಿಯನ್ನು ತೋರಿಸಿ ಅನುದಾನವನ್ನು ಪಡೆಯುತ್ತಿವೆ. ಕಪಾರ್ಟ ಸಂಸ್ಥೆಯು ಕಳೆದ ವರ್ಷ ಅಂದರೆ 14-4- 1999ರಂದು ಪ್ರಾರಂಭಗೊಂಡು ಇದುವರೆಗೂ 24 ಸ್ವಯಂ ಸೇವಾ ಸಂಸ್ಥೆಗಳಿಗೆ 68.27 ಲಕ್ಷಗಳಷ್ಟು ಬೇರೆ ಬೇರೆ ಯೋಜನೆಗಳಿಗಾಗಿ ಮಂಜೂರು ಮಾಡಿದೆ. ಅಲ್ಲದೆ, ಇದುವರೆಗೂ 5 ಕಾರ್ಯಗಾರಗಳನ್ನು ಕರ್ನಾಟಕ, ಕೇರಳ ಮತ್ತು ಗೋವಾ ರಾಜ್ಯಗಳಲ್ಲಿ ನಡೆಸಲಾಗಿದೆ.

ಆ) ಕಪಾರ್ಟ ಸಂಸ್ಥೆಯ ಪ್ರಾದೇಶಿಕ ಕಚೇರಿಯು ಕರ್ನಾಟಕ, ಕೇರಳ, ಗೋವಾ ಮತ್ತು ಲಕ್ಷ ದ್ವೀಪ ಈ ನಾಲ್ಕು ರಾಜ್ಯಗಳನ್ನೊಳಗೊಂಡು ಕಾರ್ಯ ನಿರ್ವಹಿಸುತ್ತಿರುವುದರಿಂದ ಆಯಾ ರಾಜ್ಯದ ಸರ್ಕಾರಗಳ ಪ್ರತಿನಿಧಿಗಳು ಮಂಜೂರಾತಿಯ ಸಭೆಯಲ್ಲಿ ಸದಸ್ಯರಾಗಿ ಪಾಲ್ಗೊಳ್ಳುತ್ತಿರುತ್ತಾರೆ. ಕಳೆದ 3ನೇ ಪ್ರಾದೇಶಿಕ ಕಚೇರಿಯ ಸಭೆಯನ್ನು ತಾ. 29-2-2000ದಂದು ನಡೆಸಲಾಯಿತು. ಇದರಲ್ಲಿ ರಾಜ್ಯದ ಹಿರಿಯ ಅಧಿಕಾರಿಯೊಬ್ಬರು ಭಾಗವಹಿಸಿರುತ್ತಾರೆ.

ಮಂಗಳೂರು ಸರ್ಕಾರಿ ಆಸ್ಪತ್ರೆಗಳಲ್ಲಿ ವಿದ್ಯುತ್ ಬಾಕಿ.

2769 (3256) ಶ್ರೀ ಯೋಗೀಶ್ ಭಟ್. ಎನ್. (ಮಂಗಳೂರು): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ಸರ್ಕಾರಿ ಅಧೀನದ ಸಾರ್ವಜನಿಕ ಲೇಡಿಗೋಷನ್ ಮಹಿಳಾ ಆಸ್ಪತ್ರೆ ವಿದ್ಯುತ್ ಬಾಕಿ ನಿಲ್ಲಿಸಿ ಕೊಂಡಿರುವುದು ನಿಜವೇ?

ಆ) ಹಾಗಿದ್ದಲ್ಲಿ ಎಷ್ಟು ಹಣ ಪಾವತಿ ಮಾಡಬೇಕಾಗಿದೆ?

ಇ) ಈ ಆಸ್ಪತ್ರೆಗೆ ವಿದ್ಯುತ್ ಪ್ರಸರಣ ನಿಲ್ಲಿಸುವುದಾಗಿ ತಿಳಿಸಿರುವುದು ನಿಜವೇ?

ಈ) ಇದರಿಂದ ಮಂಗಳೂರು ಜನರಿಗೆ ತೊಂದರೆಯಾಗುತ್ತಿರುವುದು ನಿಜವೇ?

ಡಾ॥ ಎ. ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಹೌದು.

ಆ) ರೂ. 70,55,863.00ಗಳನ್ನು ಪಾವತಿಸಬೇಕಾಗಿದೆ. (ರೂ. ಎಪ್ಪತ್ತು ಲಕ್ಷದ ಐವತ್ತೈದು ಸಾವಿರದ ಎಂಟುನೂರ ಅರವತ್ತ ಮೂರು ಮಾತ್ರ)

ಇ) ಹೌದು.

ಈ) ವಿದ್ಯುತ್‌ನ್ನು ಈ ವರೆಗೆ ಕಡಿತಗೊಳಿಸಿಲ್ಲ. ಸಾರ್ವಜನಿಕರ ಹಿತದೃಷ್ಟಿಯಿಂದ ವಿದ್ಯುತ್ ಸರಬರಾಜನ್ನು ಕಡಿತಗೊಳಿಸದಂತೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವನ್ನು ಕೋರಿದೆ.

ಚನ್ನಗಿರಿ ಕ್ಷೇತ್ರದಲ್ಲಿ ಗ್ರಾಮೀಣ ಕಿರು ನೀರು ಪೂರೈಕೆ

2770 (3422) ಶ್ರೀ ವಡ್ನಾಳ್ ರಾಜಣ್ಣ (ಚೆನ್ನಗಿರಿ): ಮಾನ್ಯ ಗ್ರಾಮೀಣಾಭಿವೃದ್ಧಿ ಪಂ. ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚೆನ್ನಗಿರಿ ಕ್ಷೇತ್ರದಲ್ಲಿ ಗ್ರಾಮೀಣ ಕಿರು ನೀರು ಪೂರೈಕೆ ಯೋಜನೆಯಲ್ಲಿ ಎಷ್ಟು ಗ್ರಾಮಗಳಿಗೆ ನೀರಿನ ವ್ಯವಸ್ಥೆ ಮಾಡಲಾಗಿದೆ;

ಆ) ಉಳಿದ ಗ್ರಾಮಗಳಿಗೆ ಕಿರು ನೀರು ಪೂರೈಕೆ ಯೋಜನೆಗಳನ್ನು ಎಂದು ಕೈಗೊಳ್ಳಲಾಗುವುದು;

ಇ) ಓವರ್‌ಹೆಡ್ ಟ್ಯಾಂಕ್‌ಗಳನ್ನು ನಿರ್ಮಿಸಿ ಎಷ್ಟು ಗ್ರಾಮಗಳಿಗೆ ನೀರಿನ ಪೂರೈಕೆ ವ್ಯವಸ್ಥೆ ಮಾಡಲಾಗುವುದು;